## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ರಾಜಾಜಿನಗರ ಉತ್ತರ ವಲಯ-1 ಬೆಂಗಳೂರು -10

ಸಂಖ್ಯೆ ಸಿ2:1759ಖಾ.ಶಾ.ಮಾ.ನ.124/2011-12 ದಿನಾಂಕ 11.6.2013

### ಜ್ಞಾಪನಾ

ವಿಷಯ:- ಐ.ಅರ್. ಪಬ್ಲಿಕ್ ಸ್ಕೂಲ್ ನಂ 195, 12ನೇ ಮುಖ್ಯ ರಸ್ತೆ ಪೀಣ್ಯ 3ನೇ ಹಂತ ಬೆಂಗಳೂರು-58. ಈ ಶಾಲೆಗೆ ಪ್ರಥಮ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ:-1. ಕಾರ್ಯದರ್ಶಿಗಳು ಇಂದಿರಮ್ಮ ಎ.ಎಂ. ಮತ್ತು ಡಾ:.ಬಿ.ಕೆ.ರಾಮಯ್ಯ ಎಜುಕೇಷನಲ್ ಎಂಡೋಮೆಂಟ್,ಟ್ರಸ್ಟ್ (ರಿ) ನಂ 774, ಸಿಗ್ಮಾ.ಎಕ್ಸಿ, 17 ಬಿ.ಮುಖ್ಯ ರಸ್ತೆ ಬೆಂಗಳೂರು-10 ಇವರ ಪ್ರಸ್ತಾವನೆ ದಿನಾಂಕ:22.2.2012.

2. ಆಯುಕ್ತರು ಸಾ.ಶಿ.ಇ.ಬೆಂಗಳೂರು ರವರ ಕಛೇರಿ ಪತ್ರ ಸಂ ಸಿ7(1)ಪ್ರಾ.ಶಿ.ಅ ನೋಂ.48/2009-10 ದಿ.05.4.2010

3. ಶಿಕ್ಷಣ ಸಂಯೋಜಕರ ಭೇಟಿ ವರದಿ ದಿ.21.2.2013.

**ಪ್ರಸ್ತಾವನೆ:-**

ಉಲ್ಲೇಖ (1) ರ ಪತ್ರದನ್ವಯ ಕಾರ್ಯದರ್ಶಿಗಳು ಇಂದಿರಮ್ಮ ಎ.ಎಂ. ಮತ್ತು ಡಾ:.ಬಿ.ಕೆ.ರಾಮಯ್ಯ ಎಜುಕೇಷನಲ್ ಎಂಡೋಮೆಂಟ್,ಟ್ರಸ್ಟ್ (ರಿ) ನಂ 774, ಸಿಗ್ಮಾ.ಎಕ್ಸಿ, 17 ಬಿ.ಮುಖ್ಯ ರಸ್ತೆ ಬೆಂಗಳೂರು-10 ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಐ.ಅರ್. ಪಬ್ಲಿಕ್ ಸ್ಕೂಲ್ ನಂ 195, 12ನೇ ಮುಖ್ಯ ರಸ್ತೆ ಪೀಣ್ಯ 3ನೇ ಹಂತ ಬೆಂಗಳೂರು-58. ಈ ಶಾಲೆಗೆ 2010-11 ನೇ ಸಾಲಿನಿಂದ 6ನೇ ತರಗತಿಗೆ ಪ್ರಥಮ ಮಾನ್ಯತೆ ಮತ್ತು 6 ರಿಂದ 7ನೇ ತರಗತಿಗೆ ಮುಂದಿನ ಐದು ವರ್ಷಗಳಿಗೆ ಮಾನ್ಯತೆ ನವೀಕರಿಸುವಂತೆ ಕೋರಿ ಪ್ರಸ್ತಾವನೆಯನ್ನು ಅಗತ್ಯವಾದ ಮಾಹಿತಿಗಳೊಂದಿಗೆ ನಿಗಧಿತ ನಮೂನೆಯೊಂದಿಗೆ ಒದಗಿಸಿರುತ್ತಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಉಲ್ಲೇಖ (2) ರ ಪ್ರಕಾರ 6 ರಿಂದ 7ನೇ ತರಗತಿಗೆ ಶಾಶ್ವತ ಅನುದಾನ ರಹಿತವಾಗಿ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ಅನುಮತಿ ನೀಡಿರುತ್ತದೆ. ಉಲ್ಲೇಖ (3)ರ ಪ್ರಕಾರ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಿದ್ದು ವರದಿಯ ಪ್ರಕಾರ ಶಾಲೆಯಲ್ಲಿ ಎಲ್ಲಾ ರೀತಿಯ ಮೂಲ ಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು ಮಕ್ಕಳ ಸುರಕ್ಷತೆಗೆ ಕ್ರಮ ಕೈಗೊಂಡಿದ್ದು, ಇಲಾಖಾ ನಿಯಮಾನುಸಾರ ಕಾರ್ಯನಿರ್ವಹಿಸುತ್ತಿರುವುದರಿಂದ 2010-11 ನೇ ಸಾಲಿಗೆ 6ನೇ ತರಗತಿಗೆ ಪ್ರಥಮ ಮಾನ್ಯತೆ ಮತ್ತು 6 ರಿಂದ 7ನೇ ತರಗತಿಗೆ ಮುಂದಿನ ಐದು ವರ್ಷಗಳಿಗೆ ಮಾನ್ಯತೆ ನವೀಕರಿಸುವಂತೆ ಶಿಫಾರಸ್ಸು ಮಾಡಿರುವುದರಿಂದ ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಈ ಶಾಲೆಗೆ ಮಾನ್ಯತೆ ನೀಡುವ ಬಗ್ಗೆ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯದರ್ಶಿಗಳು ಇಂದಿರಮ್ಮ ಎ.ಎಂ. ಮತ್ತು ಡಾ:.ಬಿ.ಕೆ.ರಾಮಯ್ಯ ಎಜುಕೇಷನಲ್ ಎಂಡೋಮೆಂಟ್,ಟ್ರಸ್ಟ್ (ರಿ) ನಂ 774, ಸಿಗ್ಮಾ.ಎಕ್ಸಿ, 17 ಬಿ.ಮುಖ್ಯ ರಸ್ತೆ ಬೆಂಗಳೂರು-10 ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಐ.ಅರ್. ಪಬ್ಲಿಕ್ ಸ್ಕೂಲ್ ನಂ 195, 12ನೇ ಮುಖ್ಯ ರಸ್ತೆ ಪೀಣ್ಯ 3ನೇ ಹಂತ ಬೆಂಗಳೂರು-58. ಈ ಶಾಲೆಗೆ ಸಮಗ್ರ ಶಿಕ್ಷಣ ಕಾಯ್ದೆ ನಿಯಮ 36(1) (ಎ) ಪ್ರಕಾರ 2010-11 ನೇ ಸಾಲಿನಿಂದ 6ನೇ ತರಗತಿಗೆ ಪ್ರಥಮ ಮಾನ್ಯತೆ ನೀಡಿ 6 ರಿಂದ 7ನೇ

For Indiramma A.M. Dr. B.K. Ramiah Educational Endowment Trust Charities

Managing Trustee

Head Mistress
I. R. PUBLIC SCHOOL
Peenya III Phase
Bangalore - 560 058

ತರಗತಿವರೆಗೆ 2010-11 ನೇ ಸಾಲಿನಿಂದ ಮುಂದಿನ ಐದು ವರ್ಷಗಳಿಗೆ ಆಂಗ್ಲ ಮಾಧ್ಯಮದಲ್ಲಿ ತಲಾ ಒಂದೊಂದು ವಿಭಾಗಗಳಿಗೆ ಶಾಶ್ವತ ಅನುದಾನ ರಹಿತವಾಗಿ ತಾತ್ಕಾಲಿಕವಾಗಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಾನ್ಯತೆ ನೀಡಿದೆ.

**ಷರತ್ತುಗಳು:-**

1.ಶಿಕ್ಷಕರ ಮತ್ತು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪಾಠೋಪಕರಣ,ಪೀಠೋಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಬೇಕು.

2.ಅರ್ಹತೆಯುಳ್ಳ ಶಿಕ್ಷಕರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವುದು.

3.ಶಿಕ್ಷಣ ಕಾಯ್ದೆಯಂತೆ ಶುಲ್ಕ ವಸೂಲಾತಿಗೆ ಕ್ರಮವಹಿಸುವುದು.

4.ಸಂಸ್ಥೆಯ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿ ಅವರಿಂದ ಪಡೆದ ಒಪ್ಪಿಗೆ ಪತ್ರದ ಛಾಯಾ ಪ್ರತಿಯನ್ನು ಹಾಜರುಪಡಿಸುವುದು

5.ಶಿಕ್ಷಕರ ಹೆಸರಿನಲ್ಲಿ ಸೇವಾ ವಹಿ ತೆರೆಯಬೇಕು ಹಾಗೂ ಬ್ಯಾಂಕ್ ಮುಖೇನ ಕನಿಷ್ಠ ವೇತನ ವಿತರಣೆ ಮಾಡಬೇಕು.

6.ಮಕ್ಕಳ ದಾಖಲಾತಿಯಲ್ಲಿ ಮೀಸಲಾತಿ ಕಡ್ಡಾಯವಾಗಿ ಪಾಲಿಸುವುದು.

7.ರಾಜ್ಯ ಪಠ್ಯಕ್ರಮ ಹಾಗೂ ಇಲಾಖೆ ನಿಗದಿಗೊಳಿಸಿದ ಪಠ್ಯ ಪುಸ್ತಕಗಳನ್ನೇ ಬಳಸುವುದು.

8.ಶಾಲಾ ಕಟ್ಟಡ ಮತ್ತು ಆವರಣದಲ್ಲಿ ಬೆಂಕಿ ಅಪಘಾತ ಮತ್ತು ಇತರೆ ಅಪಘಾತಗಳಿಂದ ತೊಂದರೆಯಾಗದಂತೆ ಶಾಲಾ ಕಟ್ಟಡದ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ವಹಿಸತಕ್ಕದ್ದು.

9.ಶಿಕ್ಷಕರರುಗಳ ನೇಮಕಾತಿಯನ್ನು ಶಿಕ್ಷಕ/ವಿದ್ಯಾರ್ಥಿಗಳ ಅನುಪಾತ 1:40:50 ರಂತೆ ಮಾಡಬೇಕು

10.ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು, ಸರ್ಕಾರ ಹಾಗೂ ಇಲಾಖೆಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

11.ಶಿಕ್ಷಣ ಕಾಯ್ದೆಯನ್ವಯ ಶಾಲಾ ಸುರಕ್ಷತೆ ಬಗ್ಗೆ ಕ್ರಮ ವಹಿಸುವುದು.

12.ಇಲಾಖೆಗೆ ಅಗತ್ಯವಾದ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಸಕಾಲದಲ್ಲಿ ನೀಡತಕ್ಕದ್ದು.

13.ಆರ್.ಟಿ.ಇ. ಅಡಿಯಲ್ಲಿ ನೊಂದಣಿಯನ್ನು ಕಡ್ಡಾಯವಾಗಿ ಪಡೆಯುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರ ವಲಯ - 1
ರಾಜಾಜಿನಗರ
ಬೆಂಗಳೂರು - 560 010

ಇವರಿಗೆ:-

1. ಕಾರ್ಯದರ್ಶಿಗಳು ಇಂದಿರಮ್ಮ ಎ.ಎಂ. ಮತ್ತು ಡಾ:.ಬಿ.ಕೆ.ರಾಮಯ್ಯ ಎಜುಕೇಷನಲ್, ಎಂಡೋಮೆಂಟ್,ಟ್ರಸ್ಟ್ (ರಿ) ನಂ 774, ಸಿಗ್ಮಾ.ಎಕ್ಸಿ, 17 ಬಿ.ಮುಖ್ಯ ರಸ್ತೆ ಬೆಂಗಳೂರು-10
2.ಮುಖ್ಯ ಶಿಕ್ಷಕರು ಐ.ಅರ್. ಪಬ್ಲಿಕ್ ಸ್ಕೂಲ್ ನಂ 195, 12ನೇ ಮುಖ್ಯ ರಸ್ತೆ ಪೀಣ್ಯ 3ನೇ ಹಂತ ಬೆಂಗಳೂರು-58.
3.ಕಛೇರಿ ಪ್ರತಿ.
4.ಕಡತದ ಪ್ರತಿ

For Indiramma A.M. Dr. B.K. Ramiah
Educational Endowment Trust Charities

Managing Trustee

Head Mistress
I. R. PUBLIC SCHOOL
Peenya III Phase
Bangalore - 560 058